<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>

<u>ಪಾಟೀ ಸವಾಲುಃ- ಶ್ರೀ. ಪಿ.ಸಿ.ಪಿ. ವಕೀಲರಿಂದ ಆರೋಪಿಯ ಪರವಾಗಿ</u>

9. ನಾನು ಈ ಪ್ರಕರಣವನ್ನು ದಾಖಲು ಮಾಡಿರುವ ದಿನಾಂಕಃ 08.11.2024 ರ ಆರೋಪಿಯ ಸ್ಟೇಟಮೆಂಟ್ ಆಫ್ ಅಕೌಂಟನ್ನು ಹಾಜರು ಪಡಿಸಿರುತ್ತೇನೆ. ಆರೋಪಿಗೆ ವ್ಯಯಕ್ತಿಕ ಉದ್ದೇಶಕ್ಕಾಗಿ ಸಾಲ ನೀಡಲಾಗಿದೆ. ಕೆ.ವೈ.ಸಿ. ಮತ್ತು ಆರ್.ಟಿ.ಸಿ. ಗಳನ್ನು ಪರಿಶೀಲಿಸಿ ಸಾಲವನ್ನು ನೀಡಲಾಗಿದೆ. ಆದರೆ ಯಾವ ವರ್ಷದ ಆರ್.ಟಿ.ಸಿ. ಎಂದು ನೆನಪಿಲ್ಲ.

10. ವಕೀಲರ ಮೂಲಕ ನೀಡಿರುವ ನೋಟಿಸು ಹಾಗೂ ದೂರಿನಲ್ಲಿ ಆರೋಪಿಗೆ ಯಾವ ದಿನಾಂಕದಂದು ಸಾಲ ನೀಡಲಾಗಿದೆ ಎಂದು ಉಲ್ಲೇಖ ಮಾಡಲಾಗಿದೆ. ಸಾಕ್ಷಿಗೆ ಸದರಿ ದಾಖಲಾತಿಗಳನ್ನು ತೋರಿಸಲಾಗಿ ಅವುಗಳಲ್ಲಿ ಉಲ್ಲೇಖವಿಲ್ಲ ಎಂದು ಹೇಳುತ್ತಾರೆ. ನಾನು ಈ ಪ್ರಕರಣ ದಾಖಲಿಸಿರುವ ವರ್ಷದ ಆರ್.ಟಿ.ಸಿ.ಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. 2020 ರಂದು ಆಸ್ತಿಯ ಆರ್.ಟಿ.ಸಿ. ಬಾಬು ಪೂಜಾರಿಯವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಸಾಲ ಮಂಜೂರು ಮಾಡಿದ ದಿನಾಂಕದ ಪಹಣಿಯನ್ನು ನಾನು ಪರೀಶಿಲನೆ ಮಾಡಿರುತ್ತೇನೆ. ಕೇವಲ ಆರ್.ಟಿ.ಸಿ.ಯನ್ನು ಪರಿಶೀಲಿಸಿ ಸಾಲವನ್ನು ನೀಡುತ್ತೇವೆ. ಆರೋಪಿಗೆ ಸದರಿ ಜಾಗ ಯಾವ ಮೂಲಕ ಬಂದಿದೆ ಎಂದು ನಾವು ಪರಿಶೀಲಿಸಿರುತ್ತೇವೆ. ಆದರೆ ಯಾವ ರೀತಿ ಬಂದಿದೆ ಎಂದು ನನಗೆ ಗೊತ್ತಿಲ್ಲ. ಆರ್.ಟಿ.ಸಿ.ಯನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲಾತಿಯನ್ನು ಪರಿಶೀಲಿಸಿರುವುದಿಲ್ಲ.

11. ಯಾವುದೇ ವ್ಯಕ್ತಿಗೆ ಸಾಲ ನೀಡುವಾಗ ನಾವು ಶ್ರೀ. ಎಸ್.ಪಿ. ವಕೀಲರ ಮೂಲಕ ಕಾನೂನು ಸಲಹೆ ಪಡೆಯುತ್ತೇವೆ. ಸಾಕ್ಷಿ ಮುಂದುವರೆದು ಸಾಲದ ಮೊತ್ತ ರೂ. 2,00,000/- ಕ್ಕಿಂತ ಕಡಿಮೆ ಇದ್ದರೇ ಕಾನೂನು ಸಲಹೆ ಪಡೆಯುವುದಿಲ್ಲ ಎಂದು ಹೇಳುತ್ತಾರೆ. ಆದರೆ ಆ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ ಬದಲಾಗಿ ಕಮೀಟಿಯವರು ಹೇಳಿರುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಸಹಿ/-

ಓ.ಹೇ.ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ